ಅಸಲು ದಾವೆ ಸಂಖ್ಯೆ -117/2019
ಪಿ.ಡಬ್ಲ್ಯೂ - 01
ದಿನಾಂಕಃ 10-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಯು ಎಸ್ ಕೆ ವಕೀಲರಿಂದ**

ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದೀರಿ ಎಂದರೆ ಆಸ್ತಿ ವಿಚಾರವಾಗಿ ಮಾಡಿದ್ದೇವೆ. ನಿಮ್ಮ ಆಸ್ತಿಯಲ್ಲಿ ಪ್ರತಿವಾದಿಯರಿಗೆ ಎಷ್ಟು ಆಸ್ತಿ ಹೋಗಿದೆ ಎಂದರೆ 12 ಗುಂಟೆ ಹೋಗಿದೆ. ಪ್ರತಿವಾದಿಯರು ನಿಮ್ಮ ಆಸ್ತಿಯಲ್ಲಿ 12 ಗುಂಟೆ ಒತ್ತುವರಿ ಮಾಡಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸರ್ವೆ ಅಧಿಕಾರಿಗಳು ಅಳತೆ ಮಾಡಿ ತಿಳಿಸಿರುತ್ತಾರೆ. ಸರ್ವೆ ಅಧಿಕಾರಿಗಳು ನೀಡಿದ ವರದಿಯನ್ನು ಏನದರೂ ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡಲು ಯಾವಾಗ ಕಾರಣ ಉಂಟಾಯಿತು ಎಂದರೆ 2020 ರಲ್ಲಿ ಕಾರಣ ಉಂಟಾಗಿರುತ್ತದೆ. ದಾವೆಯನ್ನು ಹೂಡಲು ವಕೀಲರಿಗೆ ಯಾರು ಮಾಹಿತಿಯನ್ನು ನೀಡಿದರು ನಾನೇ ನೀಡಿರುತ್ತೇನೆ. ಪ್ರತಿವಾದಿಯರು ತಮ್ಮ ಆಸ್ತಿಯಲ್ಲಿ ಎರಡು ಬೋರಗಳನ್ನು ಹೊಡಿಸಿದ್ದಾರೆ ಎಂದರೆ ನಾವೇ ಎರಡು ಬೋರನ್ನು ಹೊಡೆಸಿರುತ್ತೇವೆ.

ನಿಮ್ಮ ಜಮೀನಿನ 1 ಎಕರೆ 36 ಗುಂಟೆಯ ಉತ್ತರ ದಿಕ್ಕಿನಲ್ಲಿ ಒಂದು ಬೋರನ್ನು ಮಾತ್ರ ನೀವು ಹೊಡೆಸಿರುತ್ತೀರಿ ಎಂದರೆ ಸರಿ. 3 ಎಕರೆ 34 ಗುಂಟೆ ಜಮೀನಿನಲ್ಲಿ ಒಟ್ಟು 3 ಬೋರುಗಳು ಇವೆ ಎಂದರೆ ನಮ್ಮ ಜಮೀನಾದ 1 ಎಕರೆ 36 ಗುಂಟೆಯಲ್ಲಿ ಒಂದುಬೋರು ಇದೆ ಮತ್ತೇರೆಡು ಬೋರು ನಮ್ಮ ಜಮೀನಿನಲ್ಲಿಯೇ ಇದೆ ಎಂದು ನುಡಿಯುತ್ತಾರೆ. ಇನ್ನೇರೆಡೂ ಬೋರುಗಳನ್ನು ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ನಿಮ್ಮ ಜಮೀನಿನ ಉತ್ತರ ದಿಕ್ಕಿಗೆ ಇರುವ ಒಂದು ಬೋರನ್ನು ನೀವು ಉಪಯೋಗಿಸುತ್ತಿದ್ದೀರಿ ಎಂದರೆ ಸರಿ. ನೀವು ಉಪಯೋಗಿಸುತ್ತೀರುವ ಬೋರಿಗೆ ಕೆ ಇ ಬಿ ಕಡೆಯಿಂದ ಪರವಾನಗಿ ಪಡೆದಿದ್ದೀರಾ ಎಂದರೆ ಪಡೆದಿರುತ್ತೇನೆ. ಸದರಿ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುತ್ತದೆಯಾ ಎಂದರೆ ಆಗುತ್ತದೆ. ಪ್ರತಿವಾದಿಯರು ಸಹ ಕೆ ಇ ಬಿ ಕಡೆಯಿಂದ ಪರವಾನಗಿ ಪಡೆಕೊಂಡು 2 ಬೋರನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ಜಮೀನಿನಲ್ಲಿ ಇರುವ 2 ಬೋರಗಳಲ್ಲಿ ಒಂದು ಬೋರ ಕೆಟ್ಟು ಹೋಗಿದೆ ಮತ್ತು ಮತ್ತೊಂದು ಬೋರನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ.

ಪ್ರತಿವಾದಿಯರ ಭೂಮಿ ಸರಿಯಾಗಿ ಇಲ್ಲದೆ ಇದದ್ದರಿಂದ ಅಪಾಸಾತ್ ನಲ್ಲಿ ಅವರಿಗೆ 1

ಎಕರೆ 38 ಗುಂಟೆ ನೀಡಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ 2 ಗುಂಟೆ ಜಮೀನು ಜಾಸ್ತಿ ಹೋಗಿದೆ ಎಂದು ಅದನ್ನು ಕಬಳಿಸುವ ಉದ್ದೇಶಕ್ಕಾಗಿ ಸುಳ್ಳು ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ. ದಾವೆ ಮಾಡಿರುವುದರ ಬಗ್ಗೆ ನಿಮ್ಮ ವಕೀಲರ ಮುಖಾಂತರ ನೀವು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ. ಈ ದಾವೆಯ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನೀವು  ಹಾಜರುಪಡಿಸಿದ ಹಾತ್ ನಕಾಶೆಯನ್ನು ತಯಾರು ಮಾಡಲು ಯಾರು ಮಾಹಿತಿ ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಕಚ್ಚಾ ಹಾತ ನಕಾಶೆಯಲ್ಲಿ ಇರುವ ಚಕ್ಕಬಂದಿ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇದೆ. ದಾವಾ ಆಸ್ತಿಯ ಪೂರ್ವಕ್ಕೆ ಯಾರ ಆಸ್ತಿ ಇದೆ ಎಂದರೆ ಪರಸಪ್ಪ ಕಳ್ಳಿಮನಿ, ಪಶ್ಚಿಮಕ್ಕೆಃ ಶಿವಯ್ಯ ಮಠದವರ, ಉತ್ತರಕ್ಕೆಃ ಶಿವಯ್ಯ ಮಠದವರ, ದಕ್ಷಿಣಕ್ಕೆ ನೀಲಪ್ಪ ನಿಂಗಪ್ಪ ಚಪ್ಪರದ ರವರ ಆಸ್ತಿ ಬರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.